ಶ್ರೀ ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳ

# ಬೌದ್ಧ ಧರ್ಮ ದರ್ಶನ

## ಗ್ರಂಥಲೋಕಾರ್ಪಣ ಸಮಾರಂಭ




ದಿವ್ಯಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು**

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಶ್ರೀಕ್ಷೇತ್ರ

ಗ್ರಂಥ ಲೋಕಾರ್ಪಣೆ

**ನಿರಾಭಾರಿ ಚರಮೂರ್ತಿ ಪರಮಪೂಜ್ಯ**

**ಶ್ರೀ ಸಿದ್ಧೇಶ್ವರ ಸ್ವಾಮಿಗಳು**

ಶ್ರೀ ಜ್ಞಾನಯೋಗಾಶ್ರಮ, ವಿಜಯಪುರ

ಸಮ್ಮುಖ

**ನಿ.ಪ್ರ.ಸ್ವ. ಪರಮಪೂಜ್ಯ**

**ಡಾ. ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು**

ಅಧ್ಯಕ್ಷರು, ಶ್ರೀ ಕುಂದೂರು ಮಠ, ಮೈಸೂರು

ಅಧ್ಯಕ್ಷತೆ

**ಪರಮಪೂಜ್ಯ ಭಂತೆ ವೀರ್ಯಶೀಲ**

ವಿಶ್ವಮೈತ್ರಿ ಬುದ್ಧವಿಹಾರ, ಮೈಸೂರು

ಗ್ರಂಥವನ್ನು ಕುರಿತು

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

ಖ್ಯಾತ ಸಾಹಿತಿಗಳು ಹಾಗೂ ವಿಶ್ರಾಂತ ಕುಲಪತಿಗಳು,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು

ಮುಖ್ಯ ಅತಿಥಿಗಳು

**ಪ್ರೊ. ಪದ್ಮಾಶೇಖರ್**

ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು

ದಿನಾಂಕ
22-8-2016ನೇ
ಸೋಮವಾರ
ಸಂಜೆ 5.30 ಗಂಟೆಗೆ

ಸ್ಥಳ
ಶ್ರೀ ಶಿವರಾತ್ರಿ ರಾಜೇಂದ್ರ ಭವನ
ಜೆಎಸ್‌ಎಸ್ ಆಸ್ಪತ್ರೆ ಆವರಣ
ಎಂ.ಜಿ. ರಸ್ತೆ, ಮೈಸೂರು

ಲಘು ಉಪಹಾರ
ಸಂಜೆ 5.00 ಗಂಟೆಗೆ

ತಮಗೆ ಆತ್ಮೀಯ ಸುಸ್ವಾಗತ

ಸಂವಹನ : ಪ್ರಕಾಶಕರು
ಶಿವರಾಂಪೇಟೆ, ಮೈಸೂರು

ಉನ್ಮೇಷ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಇಂಡಾಲಜಿ (ರಿ)
ಬಿಲ್ಲೇ ಮೊಹಲ್ಲಾ, ಮೈಸೂರು

ಡಾ. ಶ್ರೀ ಶರತ್‌ಚಂದ್ರಸ್ವಾಮಿಗಳು ಮೈಸೂರಿನ ಶ್ರೀಕುಂದೂರುಮಠದ ಕಿರಿಯ ಶ್ರೀಗಳು. ಖ್ಯಾತ ವಿದ್ವಾಂಸರಾದ ಡಾ. ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳವರ ಶಿಷ್ಯರು. ಹಲವು ಚಿನ್ನದ ಪದಕಗಳೊಂದಿಗೆ ಸಂಸ್ಕೃತದಲ್ಲಿ ಎಂ.ಎ ಮತ್ತು ಶೈವದರ್ಶನವನ್ನು ಕುರಿತು ಸಂಶೋಧನೆ ನಡೆಸಿ ಅತ್ಯುತ್ತಮ ಸಂಶೋಧನಾ ಮಹಾಪ್ರಬಂಧವೆಂಬ ಪ್ರಶಸ್ತಿಯೊಂದಿಗೆ ಪಿಎಚ್.ಡಿ ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದಿಂದ ಪಡೆದಿರುವ ಶ್ರೀಗಳು, ಬೌದ್ಧದರ್ಶನದಲ್ಲಿ ವಿಶೇಷಾಧ್ಯಯನವನ್ನು ಮಾಡಿದ್ದಾರೆ. ಶಕ್ತಿವಿಶಿಷ್ಟಾದ್ವೈತ ವೇದಾಂತದಲ್ಲಿ ವಿದ್ವತ್ ಪದವಿಯನ್ನು ಪಡೆದಿದ್ದಾರೆ. ಹಸ್ತಪ್ರತಿಶಾಸ್ತ್ರದಲ್ಲಿ ವಿಶೇಷ ಪರಿಣತಿಯನ್ನು ಹೊಂದಿ, ಹಲವು ಪ್ರಾಚೀನ ಲಿಪಿಗಳನ್ನು ಬಲ್ಲವರಾಗಿರುವ ಅವರು, ಪಾಲೀ-ಪ್ರಾಕೃತವೂ ಸೇರಿದಂತೆ ಬಹುಭಾಷೆಗಳಲ್ಲಿ ಪರಿಣತರಾಗಿದ್ದಾರೆ. ಅನೇಕ ಗ್ರಂಥಗಳ ಸಂಪಾದಕರಾಗಿರುವ ಶ್ರೀಗಳು ಹತ್ತು ಹಲವು ಸಂಶೋಧನಾ ಲೇಖನಗಳ ಕರ್ತೃಗಳು. ಹಲವು ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಮ್ಮೇಳನಗಳು ಹಾಗೂ ವಿದ್ವತ್ಸಭೆಗಳಲ್ಲಿ ವಿಷಯಮಂಡನೆಗಳನ್ನು ಮಾಡಿರುವ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಪ್ರಸ್ತುತ ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ನಿಕಾಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.





ಕನ್ನಡ ಸಾಹಿತ್ಯಲೋಕದಲ್ಲಿ ಬೌದ್ಧಧರ್ಮ ಮತ್ತು ದರ್ಶನದ ಗ್ರಂಥಗಳ ಸಂಖ್ಯೆ ಕಡಿಮೆ. ಇರುವ ಗ್ರಂಥಗಳಲ್ಲಿಯೂ ಬುದ್ಧನ ಜೀವನಗಾಥೆಯ ಬಗೆಗಿರುವ ಕೃತಿಗಳೇ ಅಧಿಕ. ಪ್ರಸ್ತುತ ಗ್ರಂಥವು ಬೌದ್ಧಧರ್ಮ ಮತ್ತು ದರ್ಶನವನ್ನು ಕನ್ನಡ ಜನತೆಗೆ ಪರಿಚಯಿಸುವ ಪ್ರಯತ್ನವಾಗಿದೆ. ಬೌದ್ಧಧರ್ಮ-ದರ್ಶನದ ಇತಿಹಾಸ, ಆಚಾರ್ಯರು, ವಿಭಿನ್ನ ಸಂಪ್ರದಾಯಗಳು ಮತ್ತು ಸಿದ್ಧಾಂತಗಳು, ಬೌದ್ಧತಂತ್ರ, ಯೋಗ, ನ್ಯಾಯ, ಕಲೆ ಇತ್ಯಾದಿಗಳನ್ನು ಈ ಗ್ರಂಥವು ಬೌದ್ಧಧರ್ಮದ ಹುಟ್ಟು ಮತ್ತು ಬೆಳವಣಿಗೆ, ಬೌದ್ಧಸಾಹಿತ್ಯ ಮತ್ತು ಮೂಲ ತತ್ತ್ವಸಿದ್ಧಾಂತಗಳು, ಬೌದ್ಧ ದಾರ್ಶನಿಕ ಸಂಪ್ರದಾಯಗಳು, ಬೌದ್ಧನ್ಯಾಯ-ಯೋಗ-ತಂತ್ರ ಹಾಗೂ ಸಂಕೀರ್ಣಗಳೆಂಬ ಐದು ಭಾಗಗಳಲ್ಲಿ ಪ್ರಸ್ತುತಪಡಿಸುತ್ತದೆ. ಕನ್ನಡ ಜನತೆಗೆ ಬೌದ್ಧಧರ್ಮ ಮತ್ತು ದರ್ಶನವನ್ನು ಸಮಗ್ರವಾಗಿ, ಹಾಗೆಯೇ ಅತ್ಯಂತ ಸರಳ ಮತ್ತು ಸಂಕ್ಷಿಪ್ತವಾಗಿ ಪರಿಚಯಿಸುವ ವಿನೂತನ ಪ್ರಯತ್ನವೇ ಈ ಗ್ರಂಥ.

ISBN 9788192779904

ಪ್ರಕಾಶಕರು
ಉನ್ಮೇಷ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಇಂಡಾಲಜಿ (ರಿ)
ಮೈಸೂರು

ಬೌದ್ಧ ಧರ್ಮ ದರ್ಶನ
ಡಾ.ಶ್ರೀ ಶರತ್‌ಚಂದ್ರಸ್ವಾಮಿಗಳು

# ಬೌದ್ಧ ಧರ್ಮ ದರ್ಶನ

ಡಾ.ಶ್ರೀ ಶರತ್‌ಚಂದ್ರಸ್ವಾಮಿಗಳು



ಸಮಾಜವು ಹಲವು ಗೊಂದಲಗಳಿಗೆ ಸಿಲುಕಿ ಅನೇಕ ಬದಲಾವಣೆಗಳಿಗೆ ತನ್ನನ್ನು ತಾನು ಒಡ್ಡಿಕೊಂಡ ಸಂಕೀರ್ಣ ಪರ್ವಕಾಲದಲ್ಲಿ ಭಗವಾನ್ ಬುದ್ಧನ ಜನನ ಈ ದೇಶದಲ್ಲಾಗಿತ್ತು. ಅಂದಿನ ಸಂಕೀರ್ಣ ಸಾಮಾಜಿಕ ಹಾಗೂ ಧಾರ್ಮಿಕ ಜಂಜಡಗಳಿಂದ ಜನಸಾಮಾನ್ಯರನ್ನು ದೂರಮಾಡಿ ಅವರಿಗೆ ನೂತನವಾದ ಸತ್ಯ-ಸರಳಧರ್ಮದ ಸಹಜಮಾರ್ಗವನ್ನು ತೋರಿಸಬಲ್ಲ ಆಧ್ಯಾತ್ಮಿಕ ನಾಯಕನೊಬ್ಬನ ಅಗತ್ಯವಿದ್ದಾಗ, ಅವರೆಲ್ಲರ ಬಾಳಿಗೆ ಬೆಳಕಾಗಿ ಹುಟ್ಟಿ ಬಂದವನು ಭಗವಾನ್ ಬುದ್ಧ. ಅವನ ಅನನ್ಯ ಬೋಧನೆಗಳು ಇಂದು ವಿಶ್ವದ ಕೋಟ್ಯಾಂತರ ಜನರ ಉಸಿರಾಗಿದೆ. ಬುದ್ಧನಿರ್ವಾಣದ ಎರಡೂವರೆ ಸಾವಿರ ವರ್ಷಗಳ ನಂತರವೂ ಬೌದ್ಧಧರ್ಮದ ಪ್ರಭಾವ ಅಚ್ಚಳಿಯದಂತೆ ಉಳಿದಿರುವುದಕ್ಕೆ ಕಾರಣ, ಬುದ್ಧನ ಈ ಧರ್ಮ ತನ್ನ ಶ್ರೇಷ್ಠ ತತ್ತ್ವ-ಚಿಂತನೆಗಳ ಮೂಲಕ ಮಾನವತೆಗೆ ಒಳಿತನ್ನುಂಟು ಮಾಡುತ್ತಾ ಬಂದಿರುವುದೇ ಆಗಿದೆ. ಇಂತಹ ಅನುಪಮ ಬೌದ್ಧ ಧರ್ಮದ ವಿವಿಧ ಆಯಾಮಗಳ ಒಳನೋಟವೇ ಈ ಗ್ರಂಥದ ವಿಶೇಷತೆ.